

# ಗೆಳತಿ ಗುಡ್ಡದ ಸೆರಗಿನಲ್ಲಿ

ನಾಗಮಂಗಲ ಸಮೀಪದ ಗೆಳತಿ ಗುಡ್ಡ ಮನಮೋಹಕವಾಗಿದೆ. ಹದಿನಾರು ಕಂಬಳ ಶಿಲಾ ಮಂಟಪ ಮತ್ತು ಶಯನ ಗೃಹದ ಕುರುಹುಗಳ ಐತಿಹಾಸಿಕ ಹಿನ್ನೆಲೆ ಕುತೂಹಲ ಹುಟ್ಟಿಸುತ್ತದೆ.

■ ಗಣಂಗೂರು ನಂಜೇಗೌಡ

'ಗೆಳತಿ ಗುಡ್ಡ' ಎಂಬುದು ಪ್ರಕೃತಿ ರಮ್ಯ ತಾಣದ ಸೊಬಗು. ನಾಗಮಂಗಲ ಪಟ್ಟಣಕ್ಕೆ ಕಣ್ಣಳತೆ ದೂರದಲ್ಲಿರುವ ಈ ಪ್ರಕೃತಿ ತಾಣದಲ್ಲಿ ನಿಂತರೆ ನಿಜಕ್ಕೂ ಆಹ್ಲಾದಕರ ಅನುಭವ ಉಂಟಾಗುತ್ತದೆ. ಸುತ್ತಲೂ ಹಸಿರು ವನರಾಶಿ, ಕೂಜನಗಳ ಇಂಚರ, ಸೂಳೆಕೆರೆಯ ಮೇಲಿಂದ ಬೀಸಿ ಬರುವ ತಂಗಾಳಿ ಹಾಯ್ ಎನಿಸುತ್ತದೆ. ಚಾರಣ, ನಾಟಕ, ಪರಿಸರ ಪಾಠ, ಸಾಹಿತ್ಯಕ ಕಾರ್ಯಕ್ರಮ, ಬೆಳದಿಂಗಳ ಕೂಟಗಳಿಗೆ ಈ ತಾಣ ಪ್ರಸಿದ್ಧಿ ಪಡೆದಿದೆ. ಹದಿನಾರು ಕಂಬಳ ಶಿಲಾ ಮಂಟಪ ಮತ್ತು ಆಡಳಿತಗಾರನ ಉಪ ಪತ್ನಿಯ ಆವಾಸ ಸ್ಥಾನವಾಗಿದ್ದ ಶಯನ ಗೃಹದ ಕುರುಹುಗಳನ್ನು ತನ್ನ ಒಡಲಲ್ಲಿ ಇಟ್ಟುಕೊಂಡಿರುವ ಗೆಳತಿ ಗುಡ್ಡ ತಾಣದ ಐತಿಹಾಸಿಕ ಹಿನ್ನೆಲೆ ಕುತೂಹಲ ಹುಟ್ಟಿಸುತ್ತದೆ.

ಅದು 15ನೇ ಶತಮಾನದ ಮಧ್ಯ ಭಾಗ. ಸಿಂಗಣ್ಣ ಡಣಾಯಕ ಎಂಬಾತ ವಿಜಯನಗರ ಸಾಮ್ರಾಜ್ಯದ ಪ್ರತಿನಿಧಿಯಾಗಿ ನಾಗಮಂಗಲ ಸೀಮೆಯ ಆಡಳಿತವನ್ನು ನೋಡಿಕೊಳ್ಳುತ್ತಿದ್ದ. ಕ್ರಿ.ಶ. 1450ರ ಸುಮಾರಿಗೆ 'ನಾಗಮಂಗಲದ ಪ್ರಭು'ವಾಗಿ ಅಧಿಕಾರಕ್ಕೆ ಬಂದ. ಆತನ ಹಿರಿಯ ಮಗ ತಿಮ್ಮಣ್ಣ ಡಣಾಯಕ ಸಾಕಷ್ಟು ಕೆರೆ, ಕಟ್ಟೆಗಳನ್ನು ಕಟ್ಟಿಸಿದ. ದೇಗುಲಗಳನ್ನು ನಿರ್ಮಿಸಿದ. ಶ್ರೀರಂಗಪಟ್ಟಣ ಕೋಟೆಗೆ ಅಸ್ತಿಭಾರ ಹಾಕಿದವನೂ ಈತನೇ. ತಿಮ್ಮಣ್ಣ ಡಣಾಯಕ ತನ್ನ ಉಪ ಪತ್ನಿಯನ್ನು ಇರಿಸಲು ಅರಣ್ಯದ ಕಲ್ಲು ಬಂಡೆಯ ಮೇಲೆ ಮಂಟಪ ಮತ್ತು ಬಂಡೆಯೊಂದರ ಕೆಳಗೆ ನೆಲಮಾಳಿಗೆ ರೂಪದ ಶಯನ ಗೃಹವನ್ನು ನಿರ್ಮಿಸಿದ.

ತನ್ನ ಮನದನ್ನೆ ಚಂದ್ರಸಾನಿಯ ಕೋರಿಕೆಯಂತೆ ಅರಣ್ಯದ ಸೆರಗಿನಲ್ಲಿ ಕೆರೆಯನ್ನೂ ಕಟ್ಟಿಸಿದ. ಆದರೆ ಕೆರೆಯ ಕೋಡಿ ನಿಲ್ಲದೆ ಪದೇ ಪದೇ ಕುಸಿಯುತ್ತಿತ್ತಂತೆ. ನರ ಬಲಿ ನೀಡಿದರೆ ಕೋಡಿ ಗಟ್ಟಿಯಾಗಿ ನಿಲ್ಲುತ್ತದೆ ಎಂದು ಜ್ಯೋತಿಷಿಯೊಬ್ಬರು ನಾಯಕನಿಗೆ ಹೇಳಿದರಂತೆ. ಈ ಮಾತನ್ನು ಕೇಳಿದ ಚಂದ್ರಸಾನಿ ತಾನೇ 'ಕೆರೆಗೆ ಹಾರ'ವಾಗಿ ತ್ಯಾಗಮಯಿಯಾದಳಂತೆ ಎಂಬ ಮಾತು ಪ್ರಚಲಿತದಲ್ಲಿದೆ.

'ಸೂಳೆ ಕೆರೆ' ಎಂಬ ಈ ವಿಶಾಲ ಕೆರೆ ಇಡೀ ನಾಗಮಂಗಲ ಪಟ್ಟಣಕ್ಕೆ ಕುಡಿಯುವ ನೀರಿನ ಮುಖ್ಯ ಆಕರವಾಗಿದೆ. ಸೂಳೆ ಕೆರೆಯ ಆಸುಪಾಸಿನಲ್ಲಿ ಆತ ಕಟ್ಟಿಸಿದ ಶಿಂಗನರಸನ ಕೆರೆ, ಅಮ್ಮನಕಟ್ಟೆಗಳೂ ಇವೆ. ಶತಮಾನಗಳಿಂದ 'ಸೂಳೆ ಗುಡ್ಡ' ಎಂದು ಕರೆಸಿಕೊಳ್ಳುತ್ತಿದ್ದ, ಚಂದ್ರಸಾನಿಯ ಆವಾಸ ಸ್ಥಳವಾಗಿದ್ದ ಈ ತಾಣಕ್ಕೆ ಸಂಸ್ಕೃತಿ ಪ್ರಿಯರು ದಶಕದ ಹಿಂದೆ 'ಗೆಳತಿ ಗುಡ್ಡ' ಎಂದು ನಾಮಕರಣ ಮಾಡಿ ಪ್ರಕೃತಿ– ಸಂಸ್ಕೃತಿಗಳನ್ನು ಸಮ್ಮಿಲನಗೊಳಿಸಿದ್ದಾರೆ.

ಬಂಡೆಯ ಮೇಲೆ ನಿರ್ಮಿಸಿರುವ ಶಿಲಾ ಮಂಟಪದ ಸನಿಹದಲ್ಲೇ ಕಲ್ಲಿನ ಗುಹೆ ಇದೆ. ಇದರ ಒಳಗೆ ಹತ್ತು ಮಂದಿ ಕೂರುವಷ್ಟು ಜಾಗವಿದೆ. ಇದಕ್ಕೆ ಒಂದೆಡೆ ಪ್ರವೇಶ ದ್ವಾರ ಮತ್ತೊಂದೆಡೆ ನಿರ್ಗಮನ ದ್ವಾರಗಳಿವೆ. ಎರಡೂ ದ್ವಾರಗಳಿಗೆ ಮುಚ್ಚಟೆಗಳಿದ್ದವು ಎಂಬುದಕ್ಕೆ ಕುರುಹುಗಳಿವೆ ಮಳೆ, ಗಾಳಿ, ಬಿಸಿಲುಗಳಿಂದ ರಕ್ಷಿಸುವ ನೈಸರ್ಗಿಕ ಕಲ್ಲಿನ ಚಾವಣಿಯುಳ್ಳ ಈ ಗುಹೆಯನ್ನು 'ಶಯನ ಗೃಹ' ಎಂದು ಕರೆಯಾಗುತ್ತದೆ.



ಗೆಳತಿ ಗುಡ್ಡ ತಾಣದ ಸುತ್ತಲೂ 500 ಹೆಕ್ಟೇರ್ ವಿಸ್ತೀರ್ಣದಷ್ಟು ಅರಣ್ಯ ಹರಡಿಕೊಂಡಿದೆ. ಸಂಕನಹಳ್ಳಿಯಿಂದ ಹೊನ್ನಬೆಟ್ಟದ ಹೊಸೂರುವರೆಗೆ ವ್ಯಾಪಿಸಿರುವ ಈ ಕಾಡಿನಲ್ಲಿ ಮಡ್ಡಿ, ಆಲ, ನೇರಳೆ, ಶಿಶು, ತರಗುಣಿ, ನೀಲಗಿರಿ, ಹರ್ಕ್ಯುಲೆಸ್, ಮಹಾಗನಿ ಮರಗಳ ವನ್ಯ ಸಂಪತ್ತು ಸಮೃದ್ಧವಾಗಿದೆ. ಮೊಲ, ಕಾಡು ಹಂದಿ, ಚಿರತೆ, ಉಡ, ವಿವಿಧ ಜಾತಿಯ ಹಾವುಗಳಿವೆ. ನವಿಲು, ರತ್ನಪಕ್ಷಿ, ಪಿಕಳಾರ, ಗಿಡುಗ, ಗೌಜುಗ, ಪಕ್ಷಿ ಸಂಕುಲ ಕಾಣಸಿಗುತ್ತದೆ. ಬೆಟ್ಟದ ಎತ್ತರದ ಪ್ರದೇಶದಲ್ಲಿ ನಿಂತು ನೋಡಿದರೆ ಹತ್ತಾರು ಊರುಗಳು, ಕೆರೆ– ಕುಂಟೆಗಳನ್ನು ಕಣ್ತುಂಬಿಕೊಳ್ಳಬಹುದು.

ಗೆಳತಿ ಗುಡ್ಡದ ಶಿಲಾ ಮಂಟಪ, ಹಾಸು ಬಂಡೆ, ಕಲ್ಲಿನ ಗುಹೆ ಮತ್ತು ವನರಾಶಿಯನ್ನೇ ಬಳಸಿಕೊಂಡು, ಬಯಲು ರಂಗ ವೇದಿಕೆಯಲ್ಲಿ, ಹೊನಲು ಬೆಳಕಿನಲ್ಲಿ 'ಯುಯುತ್ಸು' ನಾಟಕ ಪ್ರದರ್ಶನಗೊಂಡಿದೆ. ನಾಗಮಂಗಲದ ಕನ್ನಡ ಸಂಘ ಇನ್ನಿತರ ಸಂಘಟನೆಗಳು ಆಗಾಗ ಬೆಳದಿಂಗಳ ಕೂಟ, ಗಾಯನ, ಚಾರಣ, ಕವಿಗೋಷ್ಠಿ, ಚರ್ಚಾಗೋಷ್ಠಿಗಳನ್ನು ಆಯೋಜಿಸುತ್ತವೆ. ಐತಿಹಾಸಿಕ ಹಿನ್ನೆಲೆ ಮತ್ತು ಪ್ರಾಕೃತಿಕ ಸೊಬಗಿನಿಂದ ಮೇಳೈಸಿರುವ ಈ ತಾಣಕ್ಕೆ ವಿದ್ಯುತ್ ಮತ್ತು ರಸ್ತೆ ಸಂಪರ್ಕ ಕಲ್ಪಿಸಿದರೆ ಪ್ರವಾಸಿ ತಾಣವೂ ಆಗಬಲ್ಲದು.

ಪ್ರತಿಕ್ರಿಯಿಸಿ: feedback@sudha.co.in